# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**182/2016**

ಸಿ.ಡಬ್ಲ್ಯೂ-19 ಪಿ.ಡಬ್ಲ್ಯೂ-9

| | | |
|---|---|---|
| ಹೆಸರು | ಃ | ಗೋವಿಂದರಾವ |
| ತಂದೆಃಗಂಡ | ಃ | ವಾಮನರಾವ |
| ವಯಸ್ಸು | ಃ | 63 ವರ್ಷ |
| ಉದ್ಯೋಗ | : | ನಿವೃತ್ತ ಅಸಿಸ್ಟೆಂಟ ಎಸ.ಬಿ.ಐ. ಮ್ಯಾನೇಜರ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

## ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ

ನಾನು 2011 ರಿಂದ 2014 ರ ವರೆಗೆ ಕಡಗಂಚಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 3, 18, 20, 21 ರಿಂದ 23, 27 ಪರಿಚಯ ಇರುತ್ತಾರೆ. ಉಳಿದವರ ಪರಿಚಯ ಇರುವುದಿಲ್ಲ. ದಿ.12.10.2012 ರಂದು 5.30 ಗಂಟೆಗೆ ಬ್ಯಾಂಕ ಬೀಗ ಹಾಕಿ ಮನೆಗೆ ಹೋಗಿದ್ದೇವು ಮರುದಿನ ದಿ.13.10.2012 ರಂದು ಬ್ಯಾಂಕಿಗೆ ಬಂದು ನೋಡಲಾಗಿ ಮುಂಭಾಗದ ಕೀಲಿ ಮುರಿದಿದ್ದು ನಾವು ಹೊರಗೆ ನಿಂತೆವು, ನಮ್ಮ ಮ್ಯಾನೇಜರ ಚಾಸಾ-1 ರವರು ಒಳಗೆ ಹೋದರು. ನಾನುಹಾಲಿನ ಒಳಗೆ ಹೋಗಿ ನೋಡಲಾಗಿ ಬ್ಯಾಂಕಿನ ಡೈನಿಂಗ ರೂಮನಲ್ಲಿ ಹೋಗಿ ನೋಡಲಾಗಿ ಹಿಂಭಾಗದಿಂದ ಲಾಕರ ರೂಮಿಗೆ ಅಂಟಿಕೊಂಡು ಹೋಲ್ (ಗುಂಡಿ ತೋಡಿರುವುದು) ಹಾಕಿರುವುದು ಕಂಡು ಬಂದಿತ್ತು. ನಮ್ಮ ಮ್ಯಾನೇಜರ ನಮಗೆ ತಿಳಿಸಿದರು. ಮುಂದಿನ ಕ್ರಮವನ್ನು ಜರುಗಿಸಿದೆವು. ಸುಮಾರು 46 ಲಕ್ಷ ಹಣ, ಅಂದಾಜು ಒಟ್ಟು ರೂ. 1,30,00,000/- ಬಂಗಾರ ಕಳ್ಳತನ ಆಗಿತ್ತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

## ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ಒಟ್ಟು 4500/- ಗ್ರಾಂ ಬಂಗಾರ ಕಳ್ಳತನವಾಗಿತ್ತು ಎಂದರೆ ಸರಿ. ದಿ.10.10.2013 ರಂದು ಸಿಪಿಐರವರು ಕಲಬುರಗಿಗೆ ಕರೆಯಿಸಿ ಹಣ ಹಾಗೂ ಬಂಗಾರ ಕರಗಿಸಿದ ಗಟ್ಟಿಯನ್ನು, ಟಾಟಾ ಸುಮೊವನ್ನು ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ದಿ.14.11.2013 ರಂದು ನನಗೆ ನಮ್ಮ ಸಿಬ್ಬಂದಿಗಳಿಗೆ ಸಿಪಿಐರವರು ಎಂ.ಬಿ.ನಗರ ಪೋಲಿಸ ಠಾಣೆಗೆ ಕರೆಯಿಸಿದ್ದರು ಎಂದರೆ ನಾನು ಹೋಗಿರುವುದಿಲ್ಲ. ಅಲ್ಲಿ ಒಂದು ಇಚರ ಗೂಡ್ಸ ವಾಹನ ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಐ.ಎಸ್. ಮತ್ತು ಬಿ.ಜಿ.ಬಿ. ವಕೀಲರಿಂದಃ</u>**

ಘಟನೆ ನಡೆದ ಹಿಂದಿನ ದಿನ ನಮ್ಮ ಬ್ಯಾಂಕಿನ ಟ್ರಾನಸ್ಯಾಕ್ಷನ (Transaction) ಎಷ್ಟು ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಘಟನೆ ನಡೆದಹಿಂದಿನ ದಿನ ಬ್ಯಾಂಕನಲ್ಲಿ ರೂ.46 ಲಕ್ಷ ಚಿಲ್ಲರೆ ಹಣ ಇತ್ತು. ನಾನು ಬುಕ್ಕನಲ್ಲಿ ನಮೂದಾದ ಆಧಾರ ಮೇಲೆ ಹಣ ಎಷ್ಟು ಇತ್ತು ಎಂದು ಹೇಳುತ್ತಿದ್ದೆ. ರೂ.46 ಲಕ್ಷ ಯಾವ ಮೂಲಗಳು ಜಮಾ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಳ್ಳತನ ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರು ಯಾರು ಎಂದು ಪೋಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ